GOVERNMENT OF KARNATAKA
KARNATAKA STATE PRE-UNIVERSITY EXAMINATION BOARD
II YEAR P U C EXAMINATION – MARCH 2017

SCHEME OF VALUATION

Subject Code- 01 Subject-KANNADA

| Qn.No | ಅ–ವಿಭಾಗ | Marks Allotted |
|---|---|---|
| I | **ಈ ಕೆಳಗಿನ ಪ್ರಶ್ನೆಗಳಿಗೆ ಪೂರ್ಣವಾಕ್ಯದಲ್ಲಿ ಉತ್ತರಿಸಿ** | **10x1=10** |
| 1 | ಅಂಧಕನ/ ಕುರುಡನ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ. | |
| 2 | ಅಣ್ಣನಾಜ್ಞೆಯಲಿ ಭ್ರಮಿತನಾದವನು ಅರ್ಜುನ. | |
| 3 | ಲಕ್ಷದಾರಿಗಳ ಚದುರಂಗದಾಟ ಜೀವನ. | |
| 4 | ಮೊಮ್ಮಗಳು ಮೂಜಗವನ್ನೇ ತನ್ನ ಸ್ವಂತ ಕಂಪ್ಯೂಟರ್ ಮೇಲೆ ಆವಾಹಿಸಿ ಕುಳಿತಿದ್ದಳು. | |
| 5 | ಬಸಲಿಂಗ ವೈದ್ಯರಿಗಾಗಿ ಅಲೆದಾಗ ಅವನ ಜೊತೆಗಿದ್ದ ರಾಜಕಾರಣಿ ರುದ್ರಪ್ಪ. | |
| 6 | ನಮ್ಮ ದೇಶದಲ್ಲಿ ನಿಜವಾಗಿ ಖಿಲವಾದ ಧರ್ಮ ಬೌದ್ಧ ಧರ್ಮ. | |
| 7 | ಬಾಯಿ ಚಪಲ ವೃದ್ಧರಿಗೆ, ಪೇನಶನ್‌ದಾರರಿಗೆ ಜಾಸ್ತಿ. | |
| 8 | ಆನೆಯ ಮಾವುತನ ಹೆಸರು ವೇಲಾಯುಧ. | |
| 9 | ಸಾಮಿಲ್ಲಿನಲ್ಲಿ ಕಳ್ಳನಾಟ ಇಳಿಸಲು ರಾತ್ರೋರಾತ್ರಿ ಶಿವೇಗೌಡರು ಆನೆ ಕರೆದುಕೊಂಡು ಹೋದರು. | |
| 10 | ವಿದ್ಯುತ್ ಇಲಾಖೆಯ ವಿರುದ್ಧ ಟೆಲಿಫೋನ್ ಸಿಬ್ಬಂದಿ ಮುಷ್ಕರ ಹೂಡಿದರು. | |
| | ಆ ವಿಭಾಗ | |
| **II** | **ಬೇಕಾದ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು–ವಾಕ್ಯಗಳಲ್ಲಿ ಉತ್ತರಿಸಿ** | **4x2=8** |
| 11 | ಸೂರ್ಯನಿಂದ ಹಗಲಿಗೆ/ಲೋಕಕ್ಕೆ ಬೆಳಕು , ದೀಪದಿಂದ ಇರುಳಿಗೆ ಬೆಳಕು. | |
| 12 | ಉಣ್ಣಲು ಬಾರದಿರುವ ಧನ (ಸಂಪತ್ತು), ಮುಪ್ಪಿನಲ್ಲಿ ಸಹಾಯಕ್ಕೆ ಬಾರದ ಮಗ ಇಬ್ಬರೂ ಇದ್ದರೂ ವ್ಯರ್ಥ. | |
| 13 | ಊರ ಹಂದಿಗೆ ಷಡ್ರಸಾನ್ನವನಿಕ್ಕಿ ಫಲವಿಲ್ಲ, ಅದು ಯಾವ ಮೃಷ್ಟಾನ್ನವನ್ನು ಇಕ್ಕಿದರೂ ತನ್ನ ದುರ್ಗಂಧದ ಮೇಲಿನ ಆಸೆ ಬಿಡಲಾರದು. | |
| 14 | ಫೋನು ಮಾಡಿದಾಗಲೆಲ್ಲ ಮಾತಾಡು, ಮಾತಾಡು, ಆಡು, ಮಾತನಾಡುತ್ತಿರು, ನಿಲ್ಲಿಸಬೇಡ ಎಂದು ಮುದುಕ ಗೋಗರೆಯುತ್ತಾನೆ. | |
| 15 | ಹತ್ತಿಯ ಬೀಜ ಲೋಕದ ಹಿತಕ್ಕೆ ಹೊತ್ತಿ ಉರಿಯುವ ಬತ್ತಿಯಾಗಿ, ಬತ್ತಿಯನೆ ಸುಡುವ ತೈಲವೂ ಆಗಿ, ಹೊತ್ತಿ ಉರಿಯುವ ಬೆಳಕೂ ಆಗಿ ತನ್ನನ್ನು ತಾನು ಸುಟ್ಟುಕೊಳ್ಳುತ್ತದೆ. | |
| ಆ | **ಬೇಕಾದ ಮೂರು ಪ್ರಶ್ನೆಗಳಿಗೆ ಎರಡು ಮೂರು–ವಾಕ್ಯಗಳಲ್ಲಿ ಉತ್ತರಿಸಿ** | **3x2=6** |
| 16 | ಕೈಗಾರಿಕೋದ್ಯಮಿಗಳು ಗಗನಚುಂಬಿ ಮರಗಳನ್ನು ಕಡಿದುರುಳಿಸಿದರು. ಫಲವತ್ತಾದ ಭೂಮಿಯಲ್ಲಿ ರಸ್ತೆ ನಿರ್ಮಾಣವಾಯಿತು. ಹೊಗೆಯುಗುಳುವ ಗಡಗಡ ಸದ್ದು ಮಾಡುವ ಯಂತ್ರಗಳು ಬಂದು ಕಾಡಿನ ನೀರವತೆ ನಾಶವಾಯಿತು. | |
| 17 | ಎ.ಆರ್.ಕೃಷ್ಣಶಾಸ್ತ್ರಿಗಳು ಬರೆದ ಲೇಖನ ಓದಿ ಲೇಖಕರಲ್ಲಿ ಖೇದ, ಭಯ, ಅಸಹಾಯಕತೆ, ಕ್ರೋಧದ ಭಾವಗಳು ಉಂಟಾದವು. | |
| 18 | ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೇ. ಯಾರು ಅವರುಗಳ ಸೇವೆ ಮಾಡುತ್ತರೋ ಅವರೇ ದೇವರಿಗೆ ಹತ್ತಿರವಾದವರು– ಇದು ಕಲಾಂ ಅವರ ಬದುಕಿನ ಮಂತ್ರ. | |
| 19 | ಹಳ್ಳಿಯ ಚಹಾ ಫಳಾರದ ಅಂಗಡಿಯೆಂದರೆ ಇಳಕಲ್ಲ ಸೀರೆ ಉಟ್ಟು, ಗುಳೇದಗುಡ್ಡದ ಕುಬಸ ತೊಟ್ಟ ಹೆಣ್ಣಿದ್ದಂತೆ. | |
| ಇ | **ಬೇಕಾದ ಮೂರು ಪ್ರಶ್ನೆಗಳಿಗೆ ಎರಡು ಮೂರು–ವಾಕ್ಯಗಳಲ್ಲಿ ಉತ್ತರಿಸಿ** | **3x2=6** |
| 20 | ದುರ್ಗಪ್ಪ ಇನಾಮು ಕೇಳಲೋ ಅಥವ ಚಂದಾ ವಸೂಲಿಗೋ, ಇಲ್ಲವೇ ಮನೆ ಉಪಯೋಗಕ್ಕೆ ಕಾಫಿ ಬೀಜವನ್ನೋ, ಏಲಕ್ಕಿಯನ್ನೋ ಕೇಳಲು ಬಂದಿರಬಹುದೆಂದು ನಿರೂಪಕರು | |

| | | |
|---|---|---|
| | ಯೋಚಿಸಿದರು. | |
| 21 | ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ, ಮನೆ ಮಠ ಸಂಪೂರ್ಣ ಹಾಳು ಮಾಡಿಕೊಂಡು, ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದು ಎಂದು ಜನರು ದೃಢವಾಗಿ ನಂಬಿದ್ದರು | |
| 22 | ಹುಚ್ಚು ನಾಯಿಗಳು ತಲೆ ಕೆಟ್ಟು ಕಂಡಕಂಡದ್ದಕ್ಕೆಲ್ಲ ಕಚ್ಚುತ್ತವೆ. ಮೇಜು ಕುರ್ಚಿ ಕಾಲಿಗೆಲ್ಲ ಕಚ್ಚುತ್ತವೆ ಎಂದು ಪುಟ್ಟಯ್ಯ ಹೇಳಿದನು. | |
| 23 | ಡ್ರೈವರ್ ಅಬ್ಬಾಸನ ಬೀಡಿ ಸೇದುವ ಚಪಲದಿಂದಾಗಿ ಸ್ಟೇರಿಂಗ್ ಹಿಡಿದುಕೊಳ್ಳಲು ಕ್ಲೀನರ್ ಕೃಷ್ಣನಿಗೆ ಹೇಳಿದ್ದ. ಕ್ಲೀನರ್ ಬಲವಾಗಿ ಸ್ಟೇರಿಂಗ್ ಹಿಡಿದಿದ್ದರಿಂದ ಮರದ ಕಡೆ ನುಗ್ಗುತ್ತಿದ್ದ ಲಾರಿಗೆ ಗಾಬರಿಯಲ್ಲಿ ಡ್ರೈವರ್ ಬ್ರೇಕ್ ಹಾಕಲು ಮರೆತ. ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಹಿಂದುಗಡೆ ಇದ್ದ ಅಪಾರ ತೂಕದ ದಿಮ್ಮಿಗಳು ಕ್ಯಾಬಿನ್ ಮುರಿದು ಮುನ್ನುಗ್ಗಿ ಮರಕ್ಕೂ ದಿಮ್ಮಿಗಳಿಗೂ ನಡುವೆ ಸಿಕ್ಕಿದ ಕ್ಲೀನರ್ ಡ್ರೈವರ್ ಇಬ್ಬರೂ ಅಲ್ಲೇ ಸತ್ತು ಹೋದರು. | |
| | ಇ–ವಿಭಾಗ | |
| **III ಅ** | **ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ:**<br>**(ಕವಿ ಕೃತಿ–1 ಅಂಕ, ಸಂದರ್ಭ ವಿವರಣೆ ಮತ್ತು ಸ್ವಾರಸ್ಯ– 2 ಅಂಕಗಳು)** | **2x3=6** |
| 24 | ನಾಗಚಂದ್ರ ಕವಿಯ 'ರಾಮಚಂದ್ರಚರಿತ ಪುರಾಣ'ದಿಂದ ಆರಿಸಿದ 'ಕದಡಿದ ಸಲಿಲಂ ತಿಳಿವಂದದೆ' ಪದ್ಯ ಭಾಗದ ಆಯ್ಕೆ.<br>ರಾವಣನಿಗೆ ಬಹುರೂಪಿಣಿ ವಿದ್ಯೆ ವಶವಾದ ಮೇಲೆ ಸೀತೆಯ ಹತ್ತಿರ ಬಂದು ಹೇಳುವ ಮಾತು.<br>ಬಹುರೂಪಿಣಿ ವಿದ್ಯೆಯನ್ನು ಸಾಧಿಸಿದ ಮೇಲೆ ರಾವಣ ಸೀತೆಯ ಬಳಿ ಬಂದು 'ನನಗೆ ಬಹುರೂಪಿಣಿ ಸಾಧಿತವಾಗಿದೆ. ಇನ್ನು ನನಗೆ ಅಸಾಧ್ಯವಾದ ಎದುರಾಳಿ/ಪ್ರತಿಪಕ್ಷ ಇಲ್ಲ. ನೀನು ನಿನ್ನ ರಾಮನ ಚಿಂತೆಯನ್ನು ಬಿಟ್ಟು ನನ್ನನ್ನು ಒಪ್ಪಿಕೊಂಡು, ಸಾಮ್ರಾಜ್ಯ ಸುಖವನ್ನು ಅನುಭವಿಸಿಕೊಂಡಿರು ಎಂದು ಅಹಂಕಾರದಿಂದ ಈ ಮಾತು ಹೇಳುತ್ತಾನೆ. | |
| 25 | ಪುಲಿಗೆರೆಯ ಸೋಮನಾಥ ಕವಿಯ 'ಸೋಮೇಶ್ವರ ಶತಕ' ಎಂಬ ಕಾವ್ಯದಿಂದಾರಿಸಿದ 'ಪಗೆಯಂ ಬಾಲಕ ನೆಂಬರೆ' ಎಂಬ ಶತಕ ಕಾವ್ಯ ಭಾಗದಿಂದ ಆಯ್ದ ಸಾಲು.<br>ಕವಿಯು ಓದುಗರಿಗೆ ಹೇಳಿದ ಮಾತು.<br>ಉಣ್ಣದಿರುವ ಧನ, ಮುಪ್ಪಿನಲ್ಲಾಗದ ಸುತ, ಪೈರು ಒಣಗಿದ ಮೇಲೆ ಬಂದ ಮಳೆ, ಆಪತ್ತಿನಲ್ಲಿ ಸಹಾಯಕ್ಕೆ ಬಾರ'ದ ಬಂಧುಗಳಿಂದ ಯಾವ ಲಾಭವೂ ಇಲ್ಲ. ಉಚಿತ ಕಾಲಕ್ಕೆ ಒದಗಿದ ತೃಣವೂ ಪರ್ವತದ ಸಮಾನವಾಗಿ ಕಾಣುತ್ತದೆ ಎಂದು ಕವಿ ಹೇಳುತ್ತಾನೆ. | |
| 26 | ಕೆ. ಎಸ್. ನಿಸಾರ್ ಅಹಮದ್‌ರವರು ಬರೆದ 'ವ್ಯಕ್ತಿಪರ ಕವನಗಳು' ಎಂಬ ಸಂಕಲನ ದಿಂದಾರಿಸಿದ 'ಶಿಲುಬೆ ಏರಿದ್ದಾನೆ' ಕವಿತೆಯಿಂದ ಆಯ್ದುಕೊಂಡ ಸಾಲು.<br>ಕವಿ ಏಸುವನ್ನು ಕೊಂದವರ ವಿರುದ್ಧ ಹೇಳಿರುವ ಮಾತು.<br>ನಿರಪರಾಧಿಯಾದ ಏಸುವನ್ನು ಶಿಕ್ಷೆಗೊಳಪಡಿಸಿದ ರೋಮಿನ ಯಾಜಕರು ಕೊಲೆಗಡುಕ ಬರಬ್ಬನ ಪರ ವಕಾಲತ್ತು ವಹಿಸಿ ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನನ್ನು ತೂಗಿ ಸನ್ಮಾನಿಸುತ್ತಾರೆ. ಅವರ ದುಷ್ಟ ಕೃತ್ಯವನ್ನು ವಿರೋಧಿಸುವ ಕವಿ ವ್ಯಂಗ್ಯವಾಗಿ ಈ ಮಾತು ಹೇಳುವ ಮೂಲಕ ತನ್ನ ಪ್ರತಿಭಟನೆ ತೋರಿಸುತ್ತಾರೆ. | |
| ಆ | **ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ:**<br>**(ಕವಿ ಕೃತಿ–1 ಅಂಕ, ಸಂದರ್ಭ ವಿವರಣೆ ಮತ್ತು ಸ್ವಾರಸ್ಯ– 2 ಅಂಕಗಳು)** | **1x3=3** |
| 27 | ಕೃಪಾಕರ ಸೇನಾನಿ ಮತ್ತು ಕೆ. ಪುಟ್ಟಸ್ವಾಮಿ ಅವರು ಬರೆದಿರುವ 'ಜೀವಜಾಲ' ಕೃತಿಯಿಂದ ಆಯ್ದುಕೊಂಡ 'ವಾಲ್‌ಪರೈ: ಅಭಿವೃದ್ಧಿ ತಂದ ದುರಂತ' ಎಂಬ ಗದ್ಯಭಾಗದಿಂದ ಈ ವಾಕ್ಯವನ್ನು ಆಯ್ದುಕೊಂಡಿದೆ.<br>ಲೇಖಕರು ವಾಲ್‌ಪರೈ ಪ್ರದೇಶ ಕುರಿತು ಹೇಳುವ ಮಾತಿದು.<br>ಹದಿನೆಂಟನೆಯ ಶತಮಾನದಲ್ಲಿ ಬ್ರಿಟೀಷರು ರಾಷ್ಟ್ರದೆಲ್ಲೆಡೆ ವ್ಯಾಪಿಸಿದ್ದರೂ ಅನನ್ಯ ಜೀವ ಸಂಕುಲಗಳಿಂದ ಸಮೃದ್ಧವಾಗಿದ್ದ ಪಶ್ಚಿಮಘಟ್ಟ ಶ್ರೇಣಿಯ ನಡುವಿನ ಒಂದು ದಟ್ಟ ಅರಣ್ಯ ಪ್ರದೇಶವಾಗಿದ್ದ ವಾಲ್‌ಪರೈ ಗಗನಚುಂಬಿ ಮರಗಳ ಮೇಲ್ಹಾವಣಿಯನ್ನು ಭೇದಿಸಿ ಭೂಸ್ಪರ್ಶ ಮಾಡಲು ಸೂರ್ಯ ಕಿರಣಗಳು ಸೆಣಸುತ್ತಿದ್ದ ದಟ್ಟವಾದ ಕಾಡಾಗಿತ್ತು. ಅದಕ್ಕೆ ಆಗ ಹೆಸರೇ | |

| | | |
|---|---|---|
| | ಇರಲಿಲ್ಲ ಎಂದು ಲೇಖಕರು ಹೇಳುತ್ತಾರೆ. | |
| 28 | ಎಚ್. ಆರ್. ರಾಮಕೃಷ್ಣರಾವ್ ಅವರು ಬರೆದ 'ಕಲಾಂ ಮೇಷ್ಟ್ರು' ಕೃತಿಯಿಂದ ಆರಿಸಿದ 'ಬದುಕನ್ನು ಪ್ರೀತಿಸಿದ ಸಂತ 'ಎಂಬ ಗದ್ಯಭಾಗದಿಂದ ಆಯ್ದ ಸಾಲು.<br>ಹುಡುಗನೊಬ್ಬನ ಪ್ರಶ್ನೆಗೆ ಕಲಾಂ ಅವರು ನೀಡಿದ ಉತ್ತರ.<br>ಹುಡುಗನೊಬ್ಬ ಕಲಾಂ ಅವರಿಗೆ 'ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರಾಗಿರಬಹುದು? ದಯವಿಟ್ಟು ಹೇಳಿ' ಎಂದು ಪ್ರಶ್ನಿಸಿದಾಗ ಅವನಿಗೆ ಕಲಾಂ ಅವರು " ವಿಜ್ಞಾನ ಹುಟ್ಟಿದ್ದು ಮತ್ತು ಈಗಲೂ ಜೀವಂತವಾಗಿರುವುದು ಪ್ರಶ್ನೆಗಳಿಂದ ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು" ಎಂದು ಉತ್ತರಿಸುತ್ತಾರೆ. ಮುಂದುವರಿದು ಅಗಾಧವಾದ ಪ್ರಶ್ನೆ ಕೇಳುವವರು ಮಕ್ಕಳೇ ಆದ್ದರಿಂದ ಮಗುವೇ ಮೊದಲ ವಿಜ್ಞಾನಿ ಎಂದೂ ಉತ್ತರಿಸಿದರು. | |
| ಇ | **ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ:**<br>**(ಕವಿ ಕೃತಿ–1 ಅಂಕ, ಸಂದರ್ಭ ವಿವರಣೆ ಮತ್ತು ಸ್ವಾರಸ್ಯ– 2 ಅಂಕಗಳು)** | 1x3=3 |
| 29 | ಕೆ.ಪಿ ಪೂರ್ಣಚಂದ್ರ ತೇಜಸ್ವಿಯವರು ಬರೆದ 'ಕೃಷ್ಣೇಗೌಡನ ಆನೆ' ದೀರ್ಘ ಗದ್ಯ ಕೃತಿಯಿಂದ ಆರಿಸಿದ ವಾಕ್ಯ.<br>ಮುನಸಿಪಲ್ ಪ್ರೆಸಿಡೆಂಟ್ ಖಾನ್ ಸಾಹೇಬರು ನಿರೂಪಕರಿಗೆ ಹೇಳುವ ಮಾತು. ಪೋಸ್ಟ್‌ಮನ್ ಜಬ್ಬಾರ್ ಮತ್ತು ವೆಟರ್ನರಿ ಸ್ಟಾಕಮನ್ ಪುಟ್ಟಯ್ಯ ಅವರ ಮಾತಿನಿಂದ ಚಿತಾವಣೆಗೊಂಡ ನಿರೂಪಕರು ಪ್ರೆಸಿಡೆಂಟರ ಹತ್ತಿರ ಬೀದಿ ನಾಯಿಗಳ ಹಾವಳಿ ನಿಯಂತ್ರಣ ಏಕೆ ಮಾಡಿಲ್ಲ? ಎಂದು ಕೇಳಲು ಬಂದಾಗ ಖಾನ್‌ಸಾಹೇಬರು "ಒಳ್ಳೇ ಹೇಳ್ತೀರಿ. ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ! ಖುರಾನ್ ಪ್ರಕಾರ ಈ ನಾಯಿಗಳೂ ಹಂದಿಗಳಿಗೆ ಸಮ.." ಇತ್ಯಾದಿ ಮಾತು ಹೇಳುವಾಗ ಈ ಸಾಲು ಬಂದಿದೆ. | |
| 30 | ಕೆ.ಪಿ ಪೂರ್ಣಚಂದ್ರ ತೇಜಸ್ವಿಯವರು ಬರೆದ 'ಕೃಷ್ಣೇಗೌಡನ ಆನೆ' ದೀರ್ಘ ಗದ್ಯ ಕೃತಿಯಿಂದ ಆರಿಸಿದ ವಾಕ್ಯ.<br>ಜ್ಯೂನಿಯರ್ ಎಂಜನಿಯರ್ ರಮೇಶಬಾಬುವಿಗೆ ಲೈನ್‌ಮನ್ ಶಂಕ್ರಪ್ಪ ಹೇಳಿದ ಮಾತು.<br>ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣ ನುಗ್ಗೆಹಳ್ಳಿ ಟೆಲಿಫೋನ್ ಲೈನು ಸರಿಮಾಡಲು ಹೋಗಿ ಜಂಕ್ಷನ್ ಬಾಕ್ಸ್ ಇದ್ದ ಹದಿನೇಳನೆಯ ಕಂಬ ಹತ್ತಿ ಮೂವತ್ತು ನಲವತ್ತು ತಂತಿಗಳ ತೊಡಕಿನೊಳಗೆ ನುಸುಳಿ ಜಂಕ್ಷನ್ ಬಾಕ್ಸ್ ಬಿಚ್ಚಿ ಸ್ಕ್ರೂಡ್ರೈವರ್‌ನಲ್ಲಿ ಎಂಥದನ್ನೋ ಮೀಟುತ್ತಿರಬೇಕಾದರೆ ಇದ್ದಕ್ಕಿದ್ದಂತೆಯೇ ಅಲ್ಲಿಯೇ ಸತ್ತು ಹೋಗುತ್ತಾನೆ. ಅವನನ್ನು ಹುಡುಕುತ್ತ ಬಂದ ರಮೇಶಬಾಬು ಮತ್ತು ಶಂಕ್ರಪ್ಪರಿಗೆ ಹದಿನೇಳನೆಯ ಕಂಬದ ಮೇಲೆ ಕೂತ ಸ್ಥಿತಿಯಲ್ಲೇ ಕಾಣಿಸುತ್ತಾನೆ. ಅವನನ್ನು ನೋಡಿದ ಶಂಕ್ರಪ್ಪ "ಏನ್ಸಾರ್ ಇದೂ! ಏನಾಯ್ತು ಇವನಿಗೆ? ಕಂಬದ ಮೇಲೆ ಯಾಕೋ ಕೈಲಾಸ ಕಂಡ ಹಾಗಿದೆಯಲ್ಲಾ" ಎಂದು ಕಾತರ ಕಳವಳದ ದನಿಯಲ್ಲಿ ಹೇಳುತ್ತಾನೆ. | |
| | **ಈ–ವಿಭಾಗ** | |
| **IV ಅ** | **ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದು–ಆರು ವಾಕ್ಯದಲ್ಲಿ ಉತ್ತರಿಸಿರಿ:** | **3x4=12** |
| 31 | ಸೀತೆ ಮೂರ್ಛಿತಳಾದಾಗ ರಾವಣನಲ್ಲಿ ಸೀತೆಯ ಬಗ್ಗೆ ಅನುಕಂಪ ಹುಟ್ಟಿ ತನ್ನನ್ನು ತಾನೇ ನಿಂದಿಸಿಕೊಂಡನು. ರಾಡಿಯಾದ ನೀರು ತನ್ನಿಂದ ತಾನೇ ತಿಳಿಯಾಗುವಂತೆ ತನ್ನೊಳಗೆ ತಾನು ಪಶ್ಚಾತ್ತಾಪ ಪಡುತ್ತಾ ಪ್ರಾಣಪ್ರಿಯರಾದ ರಾಮ ಸೀತೆಯರನ್ನು ಕಾರಣವೇ ಇಲ್ಲದೇ, ಕಂದರ್ಪವ್ಯಾಮೋಹದಿಂದ ದೂರ ಮಾಡಿದ ಅವಿವೇಕಿ ನಾನು. ಹೀಗೆ ಅಗಲಿಸುವ ಮೂಲಕ ಸೀತೆಯ ಅಪಾರವಾದ ದು:ಖವನ್ನು ಉಂಟು ಮಾಡಿದ ಪಾಪಿ ನಾನು ಪಶ್ಚಾತ್ತಾಪ ಪಡುತ್ತಾನೆ. | |
| 32 | ಜನಪದರ ಪ್ರಕಾರ ಇದ್ದರೆ ಬುದ್ಧಿವಂತರ ನೆರೆಯು ಇರಬೇಕು, ಖುದ್ದರಗೇಡಿ, ಕುಲಗೇಡಿ ನೆರೆಯಿದ್ದರೆ ಇದ್ದಷ್ಟು ಬುದ್ಧಿ ಕಳೆದುಕೊಳ್ಳಬೇಕಾಗುತ್ತದೆ. ಇದು ನೆರೆಹೊರೆ ಕುರಿತು ಜನಪದರು ಹೇಳುವ ರೀತಿ. ಇದರ ವಿವರಣೆ ನೀಡುವದು. | |
| 33 | ಕವಿ ಬೇಂದ್ರೆ, 'ಬೆಳಗು ಜಾವ' ಕವಿತೆಯ ಮೂಲಕ ಬೆಳಗಿನಲ್ಲಿ ಇಡೀ ಜಗತ್ತು ಹೊಸ ಹುರುಪಿನಿಂದ ಏಳುತ್ತದೆ, ಉಷೆಯ ಹೊಸ ಬಗೆಗೆ ಸೋತ ಜಗತ್ತು ಕಣ್ಣೆದುರು ಹೊಸ ಕನಸು ಕಟ್ಟಿಕೊಂಡು ಸಿದ್ಧವಾಗುತ್ತದೆ. ಆಗ 'ತುಂಬಿ ಬಾಳು ತುಂಬಿ ಕುಡಿಯಲು ಏಳಿ ಮಕ್ಕಳೇ ಹುಸಿ ನಿದ್ದೆ ಸಾಕು' ಎಂಬ ಕೂಗು ಕೇಳಿ ಬರುತ್ತದೆ. ಮರಣ ಯಾವಾಗ ಬರುವುದೋ ಹೇಳಲಾಗದು, ಆದ್ದರಿಂದ ಈಗಲೇ ನಿಮ್ಮ ನಿಮ್ಮ ಕೆಲಸದಲ್ಲಿ ಮಗ್ನರಾಗಿ ಎಂದು ಬೆಳಕು ಸೂಚಿಸುತ್ತದೆ. ಯೌವನ ದುಡಿತದ ಕಾಲ. ಚಿಂತೆ ಮುಪ್ಪಿಗಿರಲಿ ಎಂದು ಕೂಡಾ ಕವಿತೆ ಸೂಚಿಸುತ್ತದೆ. | |

| | | |
|---|---|---|
| 34 | ಕವಯಿತ್ರಿ ಬಿ. ಸುಕನ್ಯಾ ಮಾರುತಿಯವರು ನನ್ನವರ ಎಲ್ಲ ಚಿಂತೆಗಳು ದೂರವಾದಾಗ ನಾನು ನಗುತ್ತೇನೆ. ಆ ನಗು ಕೊನೆಯಿಲ್ಲದ ನಗು, ಮೊನೆಯಿಲ್ಲದ ನಗು, ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಮಳೆ ಸುರಿಸುವ ನಗು, ಹೊಳೆ ಹರಿಸುವ ನಗು, ಬೆಳೆ ಬೆಳೆಸುವ ನಗು ಆಗಿರುತ್ತದೆ ಎನ್ನುತ್ತಾರೆ. ಆಗ ಎಲ್ಲರೂ ಅಂದರೆ ಜನ, ದನ ಎಲ್ಲ ಕೂಡಿ ನಗುತ್ತೇವೆ- ಅಂದರೆ ಬರೀ ಮನುಷ್ಯರು ಮಾತ್ರವಲ್ಲ, ಪ್ರಾಣಿಗಳೂ ನಗಬೇಕು, ಅದು ಅವರ ನಗುವಿನ ವೈಶಿಷ್ಟ್ಯವಾಗಿರುತ್ತದೆ ಎನ್ನುತ್ತಾರೆ. ಸಮಷ್ಟಿಯ ಸುಖದಲ್ಲಿ ಮೂಡುವ ನಗುವೇ ಅರ್ಥಪೂರ್ಣ ಎಂಬ ಭಾವ. | |
| ಆ | **ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದು-ಆರು ವಾಕ್ಯದಲ್ಲಿ ಉತ್ತರಿಸಿರಿ:** | 2x4=8 |
| 35 | ಲೇಖಕಿಯ ಪತಿ ಕೀರ್ತಿಗೆ ಮೂತ್ರಪಿಂಡದಲ್ಲಿ ಕಲ್ಲು ಆಗಿದೆ ಎಂದಾಗ ಈ ಹಿಂದೆ ಈ ರೀತಿ ಕಲ್ಲು ಆದವರ ಭೇಟಿ ಮಾಡಿದರು. ಕಮಲಮ್ಮ ಮೇಡಂ ಹೆಚ್ಚಾಗಿ ನೀರು ಕುಡಿಯುವ ಪರಿಹಾರ ಹೇಳಿಕೊಟ್ಟರು. ಅದನ್ನು ಅನುಸರಿಸಿದ ಲೇಖಕಿ ಗಂಡನಿಗೆ ಕೊಳದಷ್ಟೇ ನೀರು ತಂದು ಇಟ್ಟು ಎಳನೀರು, ಬಾರ್ಲಿ ವಾಟರ್ ಸುರಿದರು ಎರಡು ನೀರು ಕುಡಿದೂ ಕುಡಿದೂ ನೀರಲ್ಲಿ ಕೀರ್ತಿ ತೇಲಿ ಹೋದರು ಆಪರೇಶನ್ ಮಾಡಿಸಿಕೊಳ್ಳುವ ದಿನ ಆಪರೇಶನ್ ಥಿಯೇಟರ್‌ಗೆ ಹೋದರೆ ಮೂತ್ರ ಪಿಂಡದ ಕಲ್ಲು ಕಾಣಿಸಲೇ ಇಲ್ಲ. ಎರಡೇ ದಿನದಲ್ಲಿ ಮೊಗೆದು ಸುರಿದು ಕುಡಿದ ನೀರಿನಲ್ಲೆಲ್ಲೋ ಕರಗಿ ಹೋಗಿತ್ತು. | |
| 36 | ಗುಡ್ಡ ಪರ್ತ್ರೆ ತೊಳೆಯಲು ಕುಳಿತಿದ್ದ ನದಿಯ ಅಂಚಿನಲ್ಲಿ ನೀರು ವಾರಗಟ್ಟಲೇ ಅಲ್ಲೇ ನಿಂತು ಧಣಿಗಳ ತೋಟದ ಅಂಚು ತುಳುವ ಹಲಸಿನಂತೆ ಮೆತ್ತಗಾಗಿತ್ತು. ಕಾಲಡಿಯ ಮಣ್ಣು ಮೆಲುವಾಗಿ ಕುಸಿದು ಹೊಳೆಗೆ ಜಾರಿತು. ಕ್ಷಣ ಮಾತ್ರದಲ್ಲಿ ಧನಿಗಳ ಮನೆಯ ಪಾತ್ರೆ ಸೌಟು, ಕೊಳಗ ತಪ್ಪಲೆಗಳೆಲ್ಲ ನೀರು ಪಾಲಾದವು. ಅಂಜಿದ ಗುಡ್ಡ ಈಜಿ ಮೇಲೆ ಬಂದು ತೆಂಗಿನ ಬುಡ ಬಿಡಿಸುವುದರಲ್ಲಿ ತಲ್ಲೀನನಾಗಿದ್ದ ಆತನ ತಂದೆ ಕುದುಪನಿಗೆ ಹೇಳಿದ. ಕುದುಪ ಧಣಿಗಳಿಗೇನಾದರೂ ಈ ಸುದ್ದಿ ತಲುಪಿದರೆ, ಅವರ ಸಿಟ್ಟಿನ ಭರಕ್ಕೆ ತಾವೆಲ್ಲರೂ ಹೊಳೆ ಪಾಲಾಗುವುದು ಖಂಡಿತಎಂದು ಯೋಚಿಸಿದವನೇ ಬಟ್ಟೆ ಬರೆಗಳನ್ನೆಲ್ಲ ಜಾರಿಸಿ ಕೋಮಣಾಲಂಕೃತನಾಗಿ ನೆಲಕಚ್ಚಿದ ಪಾತ್ರೆಗಳಿಗಾಗಿ ಜಾಲಾಡಿ ಪಾತ್ರೆ ತೆಗೆಯುವ ಪ್ರಯತ್ನ ಮಾಡಿದನು. | |
| 37 | ಕಾಡೂ ನಾಡೂ ಒಂದೇ ಎಂಬಂತಾಗಿರುವ ಮಳೆಗಾಲದಲ್ಲಿ ಸಂಜೆಯ ಹೊತ್ತು ರಾಜನ ಸಭೆಯನ್ನು ಮುಗಿಸಿದ ನಂತರ ಅರಮನೆಯಿಂದ ಹೊರಟ ಕಬ್ಬಿಗರ ವಲ್ಲಭನಾದ ಮುದ್ದಣನು ನೆರವೀದಿ ಹಿಡಿದು ತನ್ನನ್ನು ಪೊರೆವ ಬೀಡಾದ ಮನೆಗೆ ಬಂದನು. ಆಗ ಅವನ ಮಡದಿ ಮನೋರಮೆಯು ದೂರದಿಂದ ಗಂಡನ ಬರುವಿಕೆಯನ್ನು ಕಂಡು, ಇದಿರು ಬಂದು, ಕಾಲಿಗೆ ನೀರನ್ನು ಕೊಟ್ಟು, ಮತ್ತೆ ಕೈಹಿಡಿದು ಒಳಚೌಕಿಗೆ ಕರೆದೊಯ್ದು ಕುಳಿತುಕೊಳ್ಳಲು ಮಣೆಯಿತ್ತು, ತಿನ್ನಲು ರುಚಿಯಾದ ಹಣ್ಣುಗಳನ್ನು ಇತ್ತು, ಕುಡಿಯಲು ಕೆನೆ ಹಾಲನ್ನು, ರಸಭರಿತ ತಾಂಬೂಲವನ್ನು ನೀಡಿ ಉಪಚರಿಸಿದಳು. | |
| ಇ | **ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿರಿ:** | 2x4=8 |
| 38 | ದುರ್ಗಪ್ಪ ಒಯ್ದು ನಿರೂಪಕರ ಕೊಡಲಿ ಅಮೂಲ್ಯವಾದುದೇನೂ ಆಗಿರಲಿಲ್ಲ. ಕೆರೆ ಕೆಲಸಕ್ಕೆಂದು ಬಂದಿದ್ದ ಮಣ್ಣು ಒಡ್ಡರು ಅಗೆಯುವಾಗ ಅಡ್ಡಾಗುವ ಬೇರುಗಳನ್ನು ಕಡಿಯಲೆಂದು ಕಲ್ಲುಮಣ್ಣು ನೋಡದೇ ಯರ್ರಾಬಿರ್ರಿ ಜಪ್ಪಿ ಅದರ ಹಿಂಭಾಗ ಯಾವುದು? ಮುಂಭಾಗ ಯಾವುದು? ಗೊತ್ತಾಗದಷ್ಟು ಹಾಳು ಮಾಡಿದ್ದರು. ಅದು ಸುತ್ತಿಗೆಯ ಆಕಾರ ತಾಳಿತ್ತು. ಅದು ಕಳೆದರೂ ಕೊಡಲಿ ಹೋಯಿತೆಂಬ ದು:ಖವೇನೂ ಆಗಿತ್ತಿರಲಿಲ್ಲ. ಹೀಗಾಗಿ ಅದನ್ನು ಮರಳಿ ಪಡೆಯಲು ಹೋಗಲಿಲ್ಲ. | |
| 39 | ನಾಗರಾಜನ ಪ್ರಕಾರ ಅರಣ್ಯ ಇಲಾಖೆಗೆ ಪಿಡಬ್ಲ್ಯುಡಿನವರು, ಕರೆಂಟಿನವರು, ಟೆಲಿಫೋನಿನವರು ಮೂರು ಜನ ನಂಬರ್ ಒನ್ ಶತ್ರುಗಳಾಗಿದ್ದರು. ರಸ್ತೆಗೆ ಟಾರು ಹಾಕಲು ರಸ್ತೆ ಮರಾನೆಲ್ಲ ಕಡಿದು ಪಿಡಬ್ಲ್ಯುಡಿನೋರು ಟಾರು ಕಾಯಿಸ್ಕೋತಾರೆ ಎಂದೂ, ಕರೆಂಟಿನವರು, ಟೆಲಿಫೋನಿನವರು ಅವರ ಲೈನ್ ಎಳೆಯೋಕೆ ಫಾರೆಸ್ಟು ಕ್ಲಿಯರ್ ಮಾಡ್ತಿವಿ ಅಂತಾ ಸಾವಿರಾರು ಎಕರೆ ಕಾಡು ಕಡಿದುರುಳಿಸಿದ್ದಾರೆ ಎಂದು ತನ್ನ ಶತ್ರುಗಳ ಕಾರ್ಯಭಾರವನ್ನು ವಿವರಿಸಿದನು.ಲೈನ್ ಕ್ಲಿಯರ್ ಮಾಡೋ ನೆಪದಲ್ಲಿ ಇವರ್ಯಾರೂ ಮನೆಗೆ ಸೌದೆನೇ ಕೊಳ್ತಾ ಇಲ್ಲ ಎಂದು ಆರೋಪಿಸಿದನು. | |
| 40 | ನಿಗೂಢವಾಗಿ ಕಾಣೆಯಾದ ನಾಗರಾಜನ ಬಗ್ಗೆ ಹಲವಾರು ಊಹೋಪೋಹಗಳು ಎದ್ದವು. | |

| | | |
|---|---|---|
| | ಕೃಷ್ಣೇಗೌಡನ ಆನೆಯೇ ಅವನನ್ನು ದುರ್ಗಮವಾದ ಕಾಡಿನಲ್ಲಿ ಎಲ್ಲೋ ಒಂದು ಕಡೆ ಕೊಂದು ನೆಲಕ್ಕೆ ಹಾಕಿ ತಿಕ್ಕಿದೆ ಎಂದು ಶಂಕಿಸಿದ್ದರು. ಇನ್ನು ಕೆಲವರು ಮನ:ಪರಿವರ್ತನೆಯಾದ ನಾ'ಗರಾಜ ಕೋವಿ ತಗೆದು ಚರಂಡಿಗೆಸೆದು ಧರ್ಮಸ್ಥಳದ ಬಸ್ಸು ಹತ್ತಿದನೆಂದೂ ಧರ್ಮಸ್ಥಳದಲ್ಲಿ ಓಡಾಡುತ್ತಿದ್ದದನ್ನು ಕಣ್ಣಾರೆ ಕಂಡೆವೆಂದೂ ಕೆಲವರು ಹೇಳಿದರು. ಇನ್ನೂ ಕೆಲವರು ಗಂಗಾಧರನ ಗ್ಯಾಂಗಿನವರು ಕಾರಿನ ಗಾಜಿಗೆ ಕುತ್ತಿಗೆ ಸಿಗಿಸಿ ಕೊಂದು ಹೆಣ ಬಿಸಾಡಿದರೆಂದು ಹೇಳುತ್ತಿದ್ದರು. ಹೀಗೆ ನಾನಾ ಊಹಾಪೋಹಗಳು ಎದ್ದವು. | |
| | **ಉ-ವಿಭಾಗ** | |
| V ಅ | **ಯಾವುದಾದರೂ ಒಂದು ಪದ್ಯದ ಭಾವಾರ್ಥ ಬರೆಯಿರಿ**<br>**(ಕವಿ ಕಾವ್ಯ-1ಅಂಕ, ಹಿನ್ನೆಲೆ ಭಾವಾರ್ಥ-3 ಅಂಕ, ಸ್ವಾರಸ್ಯ-1 ಅಂಕ)** | **1 x 5=5** |
| 41 | ಕುಮಾರವ್ಯಾಸ ಕವಿಯ 'ಕರ್ನಾಟಕ ಭಾರತ ಕಥಾಮಂಜರಿ'ಯಿಂದ ಆಯ್ದ 'ಇನ್ನು ಹುಟ್ಟದೆ ಇರಲಿ ನಾರಿಯರೆನ್ನವೊಲು' ಎಂಬ ಪದ್ಯ ಭಾಗದಿಂದ ಆರಿಸಿಕೊಂಡ ಪದ್ಯ.<br>ತನಗೊದಗಿದ ಕೀಚಕನ ಸಂಕಟವನ್ನು ಪರಿಹರಿಸಲಾಗದ ಗಂಡಂದಿರನ್ನು ಕುರಿತು ಭೀಮಸೇನನಿಗೆ ದ್ರೌಪದಿ ಹೇಳುವ ಕೋಪದ ಮಾತು<br>**ಭಾವಾರ್ಥ**: ಹೆಂಡತಿಗೆ ಕಷ್ಟ ಬಂದಾಗ ಒಬ್ಬಗಂಡನೇ ತನ್ನ ಹೆಂಡತಿಗೆ ಅಪಮಾನ ಮಾಡಿದ ವೈರಿಯನ್ನು ಕತ್ತರಿಸಿ ಹಾಕುತ್ತಾನೆ. ಸಮಯ ಬಂದರೆ ತನ್ನ ಒಡಲನ್ನೂ ಅರ್ಪಿಸುತ್ತಾನೆ. ನನಗೋ ನೀವು ಗಂಡರೈವರು, ಮೂರು ಲೋಕಕ್ಕೆ ಮಿಗಿಲಾದ ವೀರರು. ಆದರೆ ಹೆಂಡತಿಯೊಬ್ಬಳನ್ನು ಕಾಪಾಡಲಾರಿರಿ. ನೀವು ಗಂಡರೋ ಅಥವಾ ಭಂಡರೋ ಹೇಳು ಎಂದು ಭೀಮಸೇನನನ್ನು ದ್ರೌಪದಿ ಝುಂಕಿಸಿ ನುಡಿದಳು.<br><br>ದ್ರೌಪದಿಯ ನೋವು, ತನ್ನ ಗಂಡರು ತನ್ನ ಬಗ್ಗೆ ಕಾಳಜಿ ತೋರಿಸಲಾರದ್ದಕ್ಕೆ ಕೋಪ ವ್ಯಕ್ತ. ಕುಮಾರವ್ಯಾಸನ ಕಾವ್ಯ ಕೌಶಲದ ಅನಾವರಣ. | |
| 42 | ಜಿ. ಎಸ್. ಶಿವರುದ್ರಪ್ಪನವರ 'ತೆರೆದ ದಾರಿ' ಸಂಕಲನದಿಂದ ಆಯ್ದುಕೊಂಡ 'ಮುಂಬೈ ಜಾತಕ' ಕವಿತೆಯ ಕೆಲವು ಸಾಲುಗಳು.<br>ನಗರದ ತಲ್ಲಣದ ಬದುಕಿನಲ್ಲಿ ಹುಟ್ಟುವ ಮಗುವಿಗೆ ನಿಜವಾದ ಆಸರೆಯಾಗಿ ನಿಲ್ಲಬಲ್ಲ ಏಕಮಾತ್ರ ಜೀವ ತಾಯಿ ಎಂಬುದರ ಚಿತ್ರಣ.<br>**ಭಾವಾರ್ಥ**: ನಗರದ್ದು ಸಾವಿರ ಗಾಲಿಯುರುಳಿ ಹೊರಳುವ ರಸ್ತೆಯಂಚಿನ ಇಕ್ಕಟ್ಟಿನ ಬದುಕು. ಅಂಥ ಇಕ್ಕಟ್ಟಿನಲ್ಲೆ ಹೇಗೆ ಜಾಗರೂಕವಾಗಿ ಸಾಗಬೇಕೆಂದು ಕಲಿಸುತ್ತಾಳೆ ತಾಯಿ. ಆಕೆಯ ಮಾರ್ಗದರ್ಶನವೇ ಮಗುವಿಗೆ ರಕ್ಷೆ. ಮಗುವನ್ನು ನಗರದ ಧಾವಂತದ ಬದುಕಿನಲ್ಲಿ ಕೈಹಿಡಿದು ನಡೆಸುತ್ತಾಳೆ. ಇರುವ ಒಂದಿಂಚು ಕೋಣೆಯಲ್ಲಿ ಕುಳಿತಿದ್ದರೂ ಹೊರಗಿನ ಎಲ್ಲ ಜಗತ್ತಿನ ಪರಿಚಯವನ್ನು ಮಗುವಿಗೆ ಮಾಡಿಕೊಡುತ್ತಾಳೆ. ಆಕೆ ಹೊರಗೆ ಹೋಗದಿದ್ದರೂ ಒಳಗಿದ್ದೇ ಎಲ್ಲ ಅರಿತಿರುತ್ತಾಳೆ. ಹಾಗೆಯೇ ಮಗುವಿಗೆ ಎಚ್ಚರಿಕೆಯನ್ನೂ ಕೊಡುತ್ತಾಳೆ.<br><br>ತಾಯಿಯೇ ಮಗುವಿನ ನಿಜವಾದ ರಕ್ಷಕಿ ಎಂಬುದನ್ನೂ, ನಗರದ ಬದುಕಿನ ಸಂಕುಚಿತತೆಯ ಚಿತ್ರವನ್ನೂ ಈ ಭಾಗ ನೀಡುತ್ತದೆ. ಕರ್ತವ್ಯನಿಷ್ಠ ತಾಯಿ ಮಾತ್ರ ಮಗುವಿಗೆ ಕಂಡಿದ್ದಾಳೆ. ಆದರೆ ಭಾವನಾತ್ಮಕ ಒಡನಾಟದ ಚಿತ್ರಣವೇ ಇಲ್ಲಿ ಕಣ್ಮರೆಯಾಗಿರುವ ವ್ಯಂಗ್ಯವನ್ನು ಕವಿ ವಿಷಾದದಿಂದ ಚಿತ್ರಿಸಿದ್ದಾರೆ. | |
| | **ಭಾಷಾಭ್ಯಾಸ** | |
| VI ಅ | **ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ** | **6 x2=12** |
| 43 | ತೃಣ-ಹುಲ್ಲು, ಸಂಕುಲ-ಗುಂಪು | |
| 44 | ಕುಸುಮ-ಹೂವು, ಪುಷ್ಪ ಇತ್ಯಾದಿ, ಮರ್ಕಟ- ಮಂಗ, ಕಪಿಇತ್ಯಾದಿ. | |
| 45 | ಸ್ವರ್ಗ-ಸಗ್ಗ, ಘೂಕ- ಗೂಗೆ/ಗೂಬೆ | |
| 46 | ನಲ್ಗತೆಯಂ- ದ್ವಿತೀಯಾ ಮಗುವೇ- ಸಂಬೋಧನಾ | |
| 47 | ಬಂದನು-ಬರು, ಗೆದ್ದನು-ಗೆಲ್ಲು. | |
| 48 | ಹೇಳಿದರು-ಭೂತಕಾಲ, ಹಾಕುತ್ತಾರೆ- ವರ್ತಮಾನ ಕಾಲ | |
| 49 | ತಲೆದೂಗು: (ಮೆಚ್ಚುಗೆ ಸೂಚಿಸು/ಸಮ್ಮತಿಸು) ಈ ಅರ್ಥ ಬರುವ ವಾಕ್ಯ ರಚನೆ ಅಪೇಕ್ಷಣೀಯ. | |